ಅಸಲು ದಾವಾ ನಂ.80/2011

ಪಿ .ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 30-05-2022

**<u>ಪಾಟೀ ಸವಾಲುಃ</u>- 4 ನೇ ಪ್ರತಿವಾದಿ ಪರ ಶ್ರೀ ಕೆ.ಜೆ.ಡಿ ವಕೀಲರಿಂದ.**

2002 ನೇ ಸಾಲಿನಲ್ಲಿ ನನಗೆ 16 ರಿಂದ 17 ವರ್ಷ ವಯಸ್ಸಾಗಿತ್ತು . ಆ ಸಮಯದಲ್ಲಿ 1 ನೇ ವಾದಿಗೆ 19 ವರ್ಷ ವಯಸ್ಸಾಗಿತ್ತು . 1 ನೇ ವಾದಿ ಜನಿಸಿದ ದಿನಾಂಕ , ತಿಂಗಳು ಹಾಗೂ ವರ್ಷ ನನಗೆ ಗೊತ್ತಿಲ್ಲ. ನಾನು ದಿನಾಂಕ 10-06-1987 ರಲ್ಲಿ ಜನಿಸಿರುತ್ತೇನೆ . 1 ನೇ ವಾದಿಯ ಜನನ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಬಲ್ಲೆ . ಈ ಪ್ರಕರಣದಲ್ಲಿ ನಾನು ಮೊದಲಿಗೆ ಪ್ರತಿವಾದಿಯಾಗಿದ್ದೆ ಎಂದರೆ ಸರಿ . ನಾನು ಈ ದಾವೆಯಲ್ಲಿ ಪ್ರತಿವಾದಿ ಪತ್ರವನ್ನು ದಾಖಲಿಸಿಲ್ಲ. 1 ನೇ ವಾದಿ 2004 ನೇ ಸಾಲಿನಲ್ಲಿ ವಿವಾಹವಾಗಿರುತ್ತಾರೆ . ನಿಖರವಾದ ದಿನಾಂಕ ನನಗೆ ತಿಳಿದಿಲ್ಲ.

4 ನೇ ಪ್ರತಿವಾದಿಯ ಸ್ವಾಧೀನಕ್ಕೆ ನಾನು ಮತ್ತು ನನ್ನ ತಂದೆ ತೊಂದರೆ ಕೊಡುತ್ತಿದ್ದೇವೆಂದು ಅವರು ಅಸಲು ದಾವೆ ಸಂಖ್ಯೆ 177/2005 ನ್ನು ದಾಖಲಿಸಿದ್ದರು ಎಂದರೆ ಸಾಕ್ಷಿ ನಾನೇ ಸ್ವಾಧೀನದಲ್ಲಿ ಇದ್ದೆ ಎಂದು ಉತ್ತರಿಸಿರುತ್ತಾರೆ . ಮೇಲೆ ಹೇಳಿದ ದಾವೆ ದಿನಾಂಕ 18-12-2010 ರಂದು ಡಿಕ್ರಿಯಾಗಿತ್ತು ಎಂದರೆ ನನಗೆ ಈ ಬಗ್ಗೆ ಗೊತ್ತಿಲ್ಲ. ಸಿ ಸಿ ರಮೇಶ್ ನನ್ನ ತಂದೆ . ಮೇಲೆ ಹೇಳಿದ ದಾವೆಯಲ್ಲಿ ನಾನು ಮತ್ತು ನನ್ನ ತಂದೆ ನಮ್ಮ ಪ್ರತಿವಾದ ಪತ್ರವನ್ನು ದಾಖಲಿಸಿದ್ದೆವು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಇಬ್ಬರು ಸಹೋದರರು . ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಯಾವ ವರ್ಷ ವಿಭಾಗವಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ವಿಭಾಗದಲ್ಲಿ ಎಷ್ಟು ಭಾಗ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪನಿಗೆ ಎಷ್ಟು ಭಾಗ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಬದುಕಿದ್ದು ಕೂಲಿ ಕೆಲಸ ಮಾಡುತ್ತಿದ್ದಾರೆ . ನಾನು ನನ್ನ ತಂದೆ ತಾಯಿ ಹಾಗೂ 1 ನೇ ವಾದಿ ಅನ್ಯೂನ್ಯವಾಗಿದ್ದೇವೆಂದರೆ ಸರಿ .

ನೀವು ಚಿಕ್ಕವರಿದ್ದಾಗ ಮನೆಯ ವ್ಯವಹಾರಗಳನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಕುಡುಕನಾದ ಕಾರಣ ನನ್ನ ತಾಯಿ ವ್ಯವಹಾರ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ . ಅಸಲು ದಾವೆ ಸಂಖ್ಯೆ 177/2005 ರಲ್ಲಿ ನನ್ನ ತಂದೆ ಪ್ರತಿವಾದ ಪತ್ರವನ್ನು ದಾಖಲಿಸಿ ಸಾಕ್ಷವನ್ನು ನುಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ದಾವಾ ಶೀರ್ಷಿಕೆಯಲ್ಲಿ ನಮೂದಿಸಿದ ವಿಳಾಸದಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಕೀಲರಿಗೆ ಪ್ರಕರಣದ

ಮಾಹಿತಿಯನ್ನು ನಾನೇ ನೀಡಿರುತ್ತೇನೆ . 2 ನೇ ಪ್ರತಿವಾದಿ ನನ್ನ ತಾಯಿ . ದಿನಾಂಕ 12-08-2011 ರಲ್ಲಿ ನಾನು ಮತ್ತು 2 ನೇ ಪ್ರತಿವಾದಿ ಪ್ರತಿವಾದ ಪತ್ರವನ್ನು ದಾಖಲಿಸಿದ್ದೇವೆ ಎಂದರೆ ಸಾಕ್ಷಿ ನ್ಯಾಯಾಲಯಕ್ಕೆ ನನ್ನ ತಾಯಿ ಬರುತ್ತಿದ್ದರು ಎಂದು ಉತ್ತರಿಸಿರುತ್ತಾರೆ . ಸಾಕ್ಷಿಗೆ ಪ್ರತಿವಾದ ಪತ್ರವನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಒಪ್ಪಿಕೊಂಡಿರುತ್ತಾರೆ . ನಾನು ನನ್ನ ತಂದೆಯ ವಿರುದ್ಧ ಜೀವನಾಂಶದ ಪ್ರಕರಣವನ್ನು ದಾಖಲುಮಾಡಿಲ್ಲ. 4 ನೇ ಪ್ರತಿವಾದಿಯ ವಿರುದ್ಧ ನಿಪಿ-5 ರ ಸಾಕ್ಷಿದಾರರು ಹಾಗೂ ಬಿಕ್ಲಂ ದಾರರ ವಿರುದ್ಧ ನಾನು ಯಾವುದೇ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲುಮಾಡಿಲ್ಲ . ದಾವಾ ಅನುಸೂಚಿಯನ್ನು ಹೊರತುಪಡಿಸಿ ನಮಗೆ ಪಿತ್ರಾರ್ಜಿತವಾಗಿ ಬಂದ ಮನೆ ಇದೆ ಎಂದರೆ ಸರಿ . ಆ ಮನೆಯಲ್ಲಿ ನಾನು , 1 ಮತ್ತು 2 ನೇ ಪ್ರತಿವಾದಿ ವಾಸವಾಗಿದ್ದೇವೆಂದರೆ ಸರಿ . 1 ನೇ ವಾದಿ ನ್ಯಾಯಾಲಯಕ್ಕೆ ಬಾರದ ಕಾರಣ ದಾವೆ ವಜಾ ಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ.

ಸಿ .ಮಿಸ್ 8/2014 ಜಾರಿಯಲ್ಲಿದ್ದಾಗ 4 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

1 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ